Reg No B G 155 9 — 4 —72

55 th Year of Publication ‘Satyavadi Daily, Mysore 4

In the Sta e - The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂರವೇರಿಸಿದ
ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೆದಾರ್ ಎಂ ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ ಎಸ್. ಕೃಷ್ಣರಾವ್ [2 ನ.ಪೈ

ನೇರ ಕಾರ್ಯಾಚರಣೆ ಮಾಡಲು ಮಹಿಳಾ ಸಂಘದ ತೀರ್ಮಾನ

ಆನೆಗಳ ಬಂಧನ

ನುಡಿಕೇರಿಯಿಂದ ಬಂದಿರುವ ವರದಿ ಪ್ರಕಾರ, ಅರಣ್ಯ ಇಲಾಖೆಯಲ್ಲಿ ಮಾರ್ಚಿ 7 ರಿಂದ ಏಪ್ರಿಲ್ 2 ನೇ ತಾರೀಖಿಗೆ 5 ಪಲಗ ಗಳೂ ಸೇರಿ 9 ಆನೆಗಳನ್ನು ಹಿಡಿದಿವೆ ಈ ಆನೆಗಳು 4 ರಿಂದ 8 ಅಡಿಗಳ ಎತ್ತರವಿದ್ದು, 5 ವರ್ಷಗಳಿಂದ 30 ವರ್ಷಗಳ ವರೆಗೆ ಇವೆ.

●

ಸುಬ್ರಾಡಿಯಾರ ಹಿತೋಕ್ತಿ

ಹುಬ್ಬಳ್ಳಿಯಲ್ಲಿ ನಡೆದ ಧರ್ಮ ಮತ್ತು ಶಾಂತಿ ಸಮ್ಮೇಳನವಲ್ಲಿ ರಾಜ್ಯಸಾಲಂಬಾದ ಶ್ರೀ ಸುಬ್ರಾಡಿಯಾರವರು ಮಾತನಾಡುತ್ತಾ, ಘರ್ಷಣೆಗಳಿಂದ ಸಂಕಟಕ್ಕೆ ಈಡಾಗಿರುವ ವಿಶ್ವಕ್ಕೆ ಶಾಂತಿ ತರಲು ದೊಡ್ಡ ಮತಗಳ ಧರ್ಮ ಬೋಧನೆಯನ್ನು ಜನಪ್ರಿಯ ಮಾಡುವ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಮಹಿಳಾ ಸಂಘದ ನಿರ್ಣಯ

ಚಾಮುಂಡಿ ಕಾಫಿ ಕ್ಯೂರಿಂಗ್ ಸಂಸ್ಥೆಯಲ್ಲಿ ಹೆಚ್ಚು ಸಂಬಳ ಕೇಳಿಕೆಗಾಗಿ ಶಾಂತಿಯುತ ಪ್ರದರ್ಶನ ಮಾಡಿದ ಮಹಿಳಾ ಕಾರ್ಮಿಕರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದುದನ್ನು ಪ್ರತಿಭಟಿಸಿ, ಅಖಿಲ ಕರ್ನಾಟಕ ಮಹಿಳಾ ಸಂಘದ ಕಾರ್ಯಕಾರಿ ಸಮಿತಿ ನೇರಕಾರ್ಯಾಚರಣೆ ನಡೆಸಲು ನಿರ್ಧರಿಸಿತು.

○

ಕಠಿಣ ಸಜೆ

ಒಂದು ಸಾವಿರ ಗ್ರಾಂ ಗಾಂಜಾ ಹೊಂದಿದ್ದ ನಾರಾಯಣ ಪ್ರಸಾದರಿಗೆ ತಿ. ನರಸೀಪುರದ ಮ್ಯಾಜಿಸ್ಟ್ರೇಟರು 2 ತಿಂಗಳು ಕಠಿಣ ಸಜೆ ಹಾಗೂ ರೂ. 100 ದಂಡ ವಿಧಿಸಿದರು.

★ ಭಾರತ ರೈಲುಗಳಲ್ಲಿ ಸಾವಾನು ಸಾಗಾಣಿಕೆ ಹೆಚ್ಚಿದೆ

ಅಧಿಕಾರಿಗಳ ಸಸ್ಪೆಂಡ್

ಗುಲ್ಬರ್ಗಾ ಜಿಲ್ಲೆಯಲ್ಲಿ ಸಿಡುಬಿನ ಹಾವಳಿ ಹೆಚ್ಚಾಗಿದ್ದರೂ ಮುಚ್ಚುಮರೆಮಾಡಿ ರಾಜ್ಯದ ಕೇಂದ್ರ ಕಚೇರಿಗೆ ತಿಳಿಸದಿದ್ದ ಗುಲ್ಬರ್ಗಾ ಜಿಲ್ಲೆಯ ಆರೋಗ್ಯ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ಆರೋಗ್ಯ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಸಸ್ಪೆಂಡು ಮಾಡಿದರು.

★

ತಮ್ಮ ಠರಾವು ವಿರುದ್ಧ ಮತ

ಬೊಂಬಾಯಿನ ಶಾಸನ ಸಭೆಯಲ್ಲಿ ಮಾಜಿ ಕೈಗಾರಿಕೆ ಮಂತ್ರಿ ಶ್ರೀ ಆರ್. ಎ ಪಾಟೀಲ್ ತಮ್ಮ ಠರಾವಿನ ವಿರುದ್ಧವಾಗಿ ತಾವು ಮತ ನೀಡಿದರು

★

ಚುನಾವಣೆ

ಹಾಸನ ಪುರಸಭೆಯ ಚುನಾವಣೆ ಬರುವ ತಿಂಗಳು 12 ನೇ ತಾರೀ ನಡೆಯಲಿದೆ.

○

ರಾಜರ ಕೊಲೆ

ಜಾಂಜಿಬಾರ್ ರಾಜ ಷೇಕ್ ಅಬೇಡ್ ಕಾರುಮೆಯರನ್ನು ಯಾರೋ ಗುಂಡಿಕ್ಕಿ ಕೊಂದು ಪರಾರಿ ಆಗಿರುವರೆಂದು ದಾರ್ ಎ ಸಲಾಂ ವಾರ್ತೆ ತಿಳಿಸುತ್ತದೆ.

★

ಮೈಸೂರಿನ ಒಪ್ಪಿಗೆ

ಆಂಧ್ರ ದೇಶದಲ್ಲಿಯ ವಿದ್ಯುಚ್ಛಕ್ತಿ ಅಭಾವ ಪರಿಹರಿಸಲು ಮೈಸೂರು ಸರ್ಕಾರ 30 ಮಿಲಿಯ ಯೂನಿಟ್ ವಿದ್ಯುಚ್ಛಕ್ತಿ ಕೊಡಲು ಒಪ್ಪಿದೆ ಎಂದು ಹೈದರಾಬಾದು ವಾರ್ತೆ ತಿಳಿಸುತ್ತದೆ.

●

ಹದಿನಾಲ್ಕು ದಿನಗಳ ಪಾಕೀಸ್ತಾನ – ಭಾರತ ಯುದ್ಧದಲ್ಲಿ 57 ಮೈಸೂರಿನ ಅಧಿಕಾರಿಗಳು ಹಾಗೂ ಇತರ ಜಗ್ಗಡಪರು ನಿಧನರಾದರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ನಿಕ್ಸನ್‌ರಿಗೆ ಪತ್ರ

ಬಾಂಗ್ಲಾ ದೇಶ ಮತ್ತು ಅಮೇರಿಕ ಶಾಶ್ವತ ಶಾಂತಿಗಾಗಿ ತನ್ನ ಸಂಬಂಧವನ್ನು ಮಾಡಿಕೊಳ್ಳಬೇಕೆಂದು ಅಮೇರಿಕ ಅಧ್ಯಕ್ಷ ನಿಕ್ಸನ್ ಬಂಗ್ಲಾ ಪ್ರಧಾನಿ ಮುಜಿಬರ್ ರೆಹಮ್ಮಾರಿಗೆ ಪತ್ರ ಬರೆದು ತಿಳಿಸಿರುವರು.

★

ರಕ್ತಪ್ರವಾಹ ಬೆದರಿಕೆ

ಕೇಂದ್ರವು ಡಿ ಎಂ ಕೆ ಸರ್ಕಾರವನ್ನು ಅಧಿಕಾರದಿಂದ ತೆಗೆಯಲು ಪ್ರಯತ್ನಿಸಿದರೆ ರಕ್ತಪಾತವಾಗುವುದೆಂದು ಕಾಂಚಿಪುರಂನಲ್ಲಿ ನಡೆದ ದ್ರಾವಿಡ ಮುನ್ನೇತ್ರ ಕಳಗಂ ಸಮ್ಮೇಳನದಲ್ಲಿ ಶ್ರೀ ಅಲಾಡಿ ಅರುಣ ಭಾರತ ಸರ್ಕಾರವನ್ನು ಎಚ್ಚರಿಸಿದರು.

★

ಜನಪ್ರಿಯತೆ

ಭಾರತದ ಗ್ರಾಮಫೋನ್ ರೆಕಾರ್ಡುಗಳು ಹೊರ ದೇಶದಲ್ಲಿ ಜನಪ್ರಿಯವಾಗುತ್ತಿವೆ.

★

ಭುಟ್ಟೋ ಒಪ್ಪಿಗೆ

ಭಾರತ–ಪಾಕೀಸ್ತಾನ ಮಧ್ಯೆ ಉದ್ವಿಗ್ನತೆ ಮಟ್ಟದ ಮಾತುಕತೆಗೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮಾಡಿದ ಸಲಹೆಗೆ ಭುಟ್ಟೋ ಒಪ್ಪುವಂತಿದೆ.

★

ಅಗ್ನಿ ಅನಾಹುತ

ರಾಯಚೂರಿನಿಂದ ಬಂದ ವರದಿಯಂತೆ ರಾಜೇಂದ್ರಗಂಜ್ ಮಾರುಕಟ್ಟೆಯಲ್ಲಿ ಅಗ್ನಿ ಅನಾಹುತದಿಂದ ಅರ್ಧ ಕೋಟಿ ರೂ ಪಾಯಿಗಳು ನಷ್ಟವಾಗಿವೆ ಹತ್ತಿ, ಹತ್ತಿ ಬೀಜ, ಕಡಲೇಕಾಯಿ, ಭತ್ತದ ಮೂಟೆಗಳು ಸುಟ್ಟುಹೋದವು.

○

● ಮಾಜಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ರಾಜ್ಯಸಭೆಗೆ ಆಯ್ಕೆ ಆದರು.

ಒಲಂಪಿಯಾ ಚಿತ್ರಮಂದಿರ ಮೈಸೂರು
ದಿನ 2–45, 6–15 ಮತ್ತು 9-45ಕ್ಕೆ

ಮತ್ತು ಶಾಲಿಮಾರ್ ಚಿತ್ರಮಂದಿರ ಮೈಸೂರು
ದಿನ 3, 6–30 ಮತ್ತು 10 ಕ್ಕೆ

(ರಾಜ್ಯದ ಪ್ರಪ್ರಥಮ ಸಂಪೂರ್ಣ ಹವಾ ನಿಯಂತ್ರಣ ಮಿನಿ ಚಿತ್ರಮಂದಿರ
ಹೊಟೇಲ್ ಸುಜಾತಾ ಹತ್ತಿರ)

ತಾ 7–4–72 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ದಿನ 3 ಪ್ರದರ್ಶನಗಳು

ಫಿಲ್ಮ್-ನಗರ್‌ನವರ ವರ್ಣದ ಅತ್ಯುತ್ತಮ ಸಂಗೀತಭರಿತ, ಸಾಮಾಜಿಕ
ಚಿತ್ರರತ್ನ

ಸೀಮಾ

ಪಾತ್ರ : ಸಿವಾಜಿ, ರಾಕೇಶ್ ರೋಷನ್, ಕಬೀರ್ ಬೇಡಿ, ಭಾರತಿ, ಪದ್ಮ ಖನ್ನ ಇನ್ನೂ ಅನೇಕ ಪ್ರಮುಖರು

ಸಂಗೀತ : ಶಂಕರ್ ಜೈಕಿಶನ್

ದಿಗ್ದರ್ಶಕ : ಸುರೇಂದ್ರ ಮೋಹನ್

ಸಂವಿಧಾನ ತಿದ್ದುವುದು ಸರಿಯಲ್ಲ

ಗ್ವಾಲಿಯರ್— ಭಾರತೀಯ ಸಂವಿಧಾನದ ಆಧಾರ ಲೋಕಕಲ್ಯಾಣದ ಆದರ್ಶವಾಗಿದೆ : ಯಾವುದೇ ಆಡಳಿತ ಪಕ್ಷ ತನಗಿಷ್ಟ ಬಂದಂತೆ ಅದನ್ನು ತಿದ್ದುತ್ತಾ ಹೋದರೆ ಅಪಾಯವುಂಟುಮಾಡಿದಂತಾಗುವುದು ಎಂದು ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯನ್ಯಾಯಾಧೀಶ ಶ್ರೀ ಜೆ.ಸಿ. ಷಾರವರು ಈಚೆಗೆ ಇಲ್ಲಿಯ ಲಯನ್ಸ್ ಕ್ಲಬ್ ಉದ್ಘಾಟಿಸುತ್ತಾ ಹೇಳಿದರು

ವೇದಪಾಠ ಕೇಂದ್ರಗಳು

ಡೆಲ್ಲಿ— ವೇದಗಳ ಸಂರಕ್ಷಣೆಗಾಗಿ ವೇದಪಾಠ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಸರಕಾರವು ಮಹಾರಾಷ್ಟ್ರ ಸರಕಾರಕ್ಕೆ ರೂ 25200 ನೀಡಿದೆ.

Help The Gorakshana

— Humanitarian Propoganda Monthly ....

ವುಡ್‌ಲ್ಯಾಂಡ್ 7-4-72 ರಿಂದ ಆನೋಫಿ 2ನೇ ವಾರ

ಪ್ರಗತಿ-ಚಿತ್ರ ಇಂಟರ್ ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಯೋಗಿತಾ ಬಾಲಿ, ಶತ್ರುಘ್ನ ಸಿನ್ಹ, ಪ್ರಾಣ್, ರೆಹಾನ್, ನಿರೂಪರಾಯ್ ಮುಂತಾದವರು

ಸಂಗೀತ – ಶಂಕರ್ ಜೈಕಿಷನ್ (ದಿನ 3 ಪ್ರದರ್ಶನಗಳು) ದಿಗ್ದರ್ಶನ – ವೀಕೇಂದ್ರ ಸಿನ್ಹ

ಬಾಲ್ಕನಿ ತರಗತಿಗಳಿಗೆ ಬೆಳಿಗ್ಗೆ 11 ರಿಂದ 12 ರ ವರೆಗೆ ಮುಂಗಡ ಟಿಕೆಟ್ ಉಂಟು

★

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕ್ಕೆ " ಕಪ್ಪು ಬಿಳುಪು "

ಅಪೆರಾ 7 4 72 ರಿಂದ

ಆಶ್ಚರ್ಯನೋಫಿ ತೆಲುಗು ಚಿತ್ರ

ಬಂದಿಪೋಟಿ ದೊಂಗಲು

ಪಾತ್ರ : ನಾಗೇಶ್ವರರಾವ್, ಎಸ್. ವಿ. ರಂಗರಾವ್, ಜಮುನ, ಕಾಂಚನ ಗುಮ್ಮಡಿ

ನಿರ್ದೇಶನ – ಬಿ. ಪ್ರಕಾಶರಾವ್ ದಿನ 3 ಪ್ರದರ್ಶನಗಳು

A Large Range of Daily Wear

Cotton Voile etc, Sarees

in up – to – Date Designs

VISIT: Bank Road Bahusar

ಶಂಕರಪ್ಪ ಸ್ಮಾರಕ ನಿರ್ಮಿಸಿ

ಎ ಲ್ಲ

ಮೈಸೂರು ನಗರ ಆಡಳಿತ ಕಾಂಗ್ರೆಸ್ ಸಮಿತಿಯ ಗಮನಕ್ಕೆ

ಮೈಸೂರು ರಾಜ್ಯ ಆಡಳಿತ ಕಾಂಗ್ರೆಸ್ ಗಮನಕ್ಕೆ

ಮೈಸೂರು ಮಂತ್ರಿಮಂಡಲದ ಗಮನಕ್ಕೆ

ಒಳಾಡಳಿತ ಶಾಖೆಯನ್ನು ಹೊಂದಿರುವ ಮುಖ್ಯ ಮಂತ್ರಿಯವರಾದ ಸನ್ಮಾನ್ಯ ಶ್ರೀ ಡಿ. ದೇವರಾಜ ಅರಸ್ ಆವರ ಸ್ಸಿ ಕ್ಕೆ

1942 ರ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಕಾರಾಗೃಹದಲ್ಲಿ ಹುತಾತ್ಮರಾದ ಶಂಕರಪ್ಪನಿಗೆ ಸೂಕ್ತ ಸ್ಮಾರಕ ರಚಿಸಿ

ಶಂಕರಪ್ಪ ಮೆಡಿಕಲ್ ವಿದ್ಯಾರ್ಥಿ. ಆನರೊಡನೆ ಕಾರಾಗೃಹದಲ್ಲಿ ಇದ್ದ, ಈಗ ಪ್ರಧಾನಿಯವರ ಬಳಿ ಸೇವೆ ಸಲ್ಲಿಸುತ್ತಿರುವ ಶ್ರೀ ಹೆಚ್. ವೈ. ಶಾರದಾ ಪ್ರಸಾದ್ ಮತ್ತು ಚಿತ್ರೋದ್ಯಮಿ ಶ್ರೀ ಎಂ. ವಿ. ಕೃಷ್ಣಸ್ವಾಮಿ ಶಂಕರಪ್ಪನ ಬಗೆಗೆ ವಿಚಾರ ತಿಳಿಸಲು ಸಮರ್ಥರು

Protect the Cow

Quality Printing Neat Binding

Lakshminarasimha Press

Sivarampet, Mysore

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಕ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ – ಹುಡುಗ

ಹೊಸ ರೀತಿಯ ತಿಳುವಳಿಕೆ ಕೊಡುವ ಆಕರ್ಷಣೀಯ ಚಿತ್ರ

Contribute Liberally

to the National Defence Fund

ಕುಟುಂಬ ಯೋಜನ

ದೇಶ ಹಿತಕಾಗಿ

Edited Printedand Published by Dharmapracharanirata M S Krishna Rao (Proprietor) at the Satyavadi Press Chamarajapuram Mysore 4